ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು –01.

ಸಂಖ್ಯೆ:ಸಿ5[1]ಲೆ.ಅ.ಬಡ್ತಿ–17/2020–21 ದಿನಾಂಕ: 10–06–2020

**ಜ್ಞಾಪನ**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್.ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಪ್ರಥಮ ದರ್ಜೆ ಸಹಾಯಕರಿಗೆ ಲೆಕ್ಕಾಧೀಕ್ಷಕರ ಹುದ್ದೆಯಲ್ಲಿ ಕೆ.ಸಿ.ಎಸ್.ಆರ್ ನಿಯಮ–32 ರನ್ವಯ ಸ್ವತಂತ್ರ ಪ್ರಭಾರದಲ್ಲಿ ಇರಿಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಸಿ5(1)ಎಸ್.ಎ.ಎಸ್/ಸಿಲಿ/01/2020–21 ದಿನಾಂಕ: 30–05–2020.

******

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್.ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಪ್ರಥಮ ದರ್ಜೆ ಸಹಾಯಕರ ಅಂತಿಮ ಸಿವಿಲ್ ಲಿಸ್ಟ್‌ನ್ನು ಉಲ್ಲೇಖಿತ ಈ ಕಛೇರಿ ಜ್ಞಾಪನದಂತೆ ಪ್ರಕಟಿಸಲಾಗಿರುತ್ತದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿನ ಕಛೇರಿಗಳಲ್ಲಿ ಬಡ್ತಿಯಿಂದ, ನಿವೃತ್ತಿಯಿಂದ ಮತ್ತಿತರೆ ಕಾರಣಗಳಿಂದ ತೆರವಾಗಿ ಖಾಲಿ ಇರುವ ಲೆಕ್ಕಾಧೀಕ್ಷಕರ ಹುದ್ದೆಗಳಿಗೆ ನಿಯಮಗಳಿಗನುಗುಣವಾಗಿ ಎಸ್.ಎ.ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅರ್ಹ ಪ್ರಥಮ ದರ್ಜೆ ಸಹಾಯಕರಿಗೆ ಕೆ.ಸಿ.ಎಸ್.ಆರ್ ನಿಯಮ–32 ರನ್ವಯ ಸ್ವತಂತ್ರ ಪ್ರಭಾರದಲ್ಲಿ ಇರಿಸಿ ಸ್ಥಳ ನಿಯುಕ್ತಿಗೊಳಿಸಲು ಉದ್ದೇಶಿಸಲಾಗಿದ್ದು, ಉಲ್ಲೇಖಿತ ಪಟ್ಟಿಯಲ್ಲಿನ ಜ್ಯೇಷ್ಠತೆಯನುಸಾರ ಅರ್ಹರಿರುವ ಪ್ರಥಮ ದರ್ಜೆ ಸಹಾಯಕರ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ. ಪ್ರತಿ ನೌಕರರಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಒಳಗೊಂಡ ಡೋಸಿಯರ್‌ನ್ನು ಸಿದ್ದಪಡಿಸಿ ಆದ್ಯತೆಯ ಮೇರೆಗೆ ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

1) 2015–16 ರಿಂದ 2019–20 ನೇ ಸಾಲಿನವರೆಗಿನ ಕಾರ್ಯನಿರ್ವಹಣಾ ವರದಿಗಳು. ಕಾರ್ಯನಿರ್ವಹಣಾ ವರದಿಗಳಲ್ಲಿ ಪರಿಶೀಲನಾಧಿಕಾರಿಗಳ ಹಾಗೂ ಅಂಗೀಕಾರ ಪ್ರಾಧಿಕಾರಿಗಳು ಕಡ್ಡಾಯವಾಗಿ ಅವರ ಷರಾ ನಮೂದಿಸಿ ಸಹಿ ಮಾಡತಕ್ಕದ್ದು.
2) ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್, ಜನರಲ್ ಲಾ ಭಾಗ–1 ಮತ್ತು ಎಸ್.ಎ.ಎಸ್ ಭಾಗ–1, ಭಾಗ–2 ಮತ್ತು ಭಾಗ–3ರಲ್ಲಿ ಉತ್ತೀರ್ಣರಾದ ಬಗ್ಗೆ ದೃಢೀಕೃತ ದಾಖಲೆ ಪ್ರತಿ.
3) ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ಪ್ರಮಾಣ ಪತ್ರ/ವಿನಾಯಿತಿ ಪ್ರಪತ್ರ.
4) ನೌಕರರ ಸೇವಾ ವಿವರಗಳು–ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ.
5) ಸಂಬಂಧಿಸಿದ ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅಥವಾ ನ್ಯಾಯಾಲಯದ ಪ್ರಕರಣಗಳಾಗಲೀ ಬಾಕಿ ಇರುವ / ಇಲ್ಲದೇ ಇರುವ ಬಗ್ಗೆ ಸಂಬಂಧಿಸಿದ ಕಛೇರಿ ಮುಖ್ಯಸ್ಥರ ದೃಢೀಕರಣ ಪತ್ರ(ವಿಚಾರಣೆಗಳು ಬಾಕಿ ಇದ್ದಲ್ಲಿ ಸಿ.ಸಿ.ಎ ನಿಯಮದಂತೆ ಕರಡು ಆರೋಪ ಪಟ್ಟಿ ಜಾರಿಯಾಗಿರಬೇಕು)
6) ಒಂದು ವೇಳೆ ಪಟ್ಟಿಯಲ್ಲಿರುವ ಸಿಬ್ಬಂದಿಗಳ ವಿರುದ್ಧ ಶಿಸ್ತು ಪ್ರಕರಣ / ನ್ಯಾಯಾಲಯ ಪ್ರಕರಣ ಬಾಕಿ ಇದ್ದಲ್ಲಿಯೂ ಸಹ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಪ್ರತಿಯನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

7) ಈ ಜ್ಞಾಪನದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ನೌಕರರುಗಳಿಗಿಂತ ಜ್ಯೇಷ್ಠತೆಯಲ್ಲಿ ಹಿರಿಯರಾಗಿದ್ದು, ಶಿಸ್ತು ಪ್ರಕರಣ ಬಾಕಿ ಇದ್ದುದರಿಂದ ಹಾಗೂ ಇನ್ನಿತರೆ ಕಾರಣಗಳಿಂದ ಬಡ್ತಿಯನ್ನು ನೀಡಿಲ್ಲದೆ ಇರುವಂತಹ ನೌಕರರುಗಳಲ್ಲಿ ಶಿಸ್ತು ಪ್ರಕರಣ ಇತ್ಯರ್ಥವಾಗಿ ದೋಷಮುಕ್ತರಾಗಿದ್ದಲ್ಲಿ ಅಥವಾ ದಂಡನಾ ಅವಧಿ ಮುಕ್ತಾಯವಾಗಿದ್ದಲ್ಲಿ ಅಂತಹ ನೌಕರರ ಪ್ರಸ್ತಾವನೆಯನ್ನು ಹಾಗೂ ಇನ್ನಿತರೆ ಕಾರಣಗಳಿಂದ ಬಡ್ತಿಗೆ ಅರ್ಹರಾದ ನೌಕರರ ಪ್ರಸ್ತಾವನೆಯನ್ನು ಸಹ ಸಲ್ಲಿಸಲು ತಿಳಿಸಿದೆ.

8) ಸಂಬಂಧಿಸಿದ ನೌಕರರ ಸೇವಾ ಪುಸ್ತಕ ಪರಿಶೀಲನೆಗಾಗಿ.

ಲಗತ್ತಿಸಿರುವ ಪಟ್ಟಿಯಲ್ಲಿರುವ ಅಭ್ಯರ್ಥಿಗಳೂ ಸೇರಿದಂತೆ, ಮೇಲೆ ವಿವರಿಸಿದ ಎಲ್ಲಾ ಅಭ್ಯರ್ಥಿಗಳ ಮಾಹಿತಿ / ದಾಖಲೆಗಳನ್ನೊಳಗೊಂಡಂತೆ ಸಿಬ್ಬಂದಿವಾರು ಡೋಸಿಯರ್ ಸಿದ್ದಪಡಿಸಿ, ಕ್ರೋಢೀಕರಿಸಿ ಪೂರ್ಣ ಪ್ರಸ್ತಾವನೆಯನ್ನು **ದಿನಾಂಕ: 18-06-2020ರಂದು** ಜಿಲ್ಲಾ ಉಪನಿರ್ದೇಶಕರ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರ ಮೂಲಕ **ಶ್ರೀ. ಹೆಚ್ ಆರ್ ನಾಗೇಶ್, ಸಹಾಯಕ ನಿರ್ದೇಶಕರು[ಆಡಳಿತ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು** ರವರಿಗೆ ಸಲ್ಲಿಸತಕ್ಕದ್ದು.

ಮೇಲ್ಕಂಡ ಮಾಹಿತಿಗಳ ಜೊತೆಯಲ್ಲಿ, ಕಛೇರಿಯ ಮುಖ್ಯಸ್ಥರುಗಳು ಅವರವರ ಜಿಲ್ಲೆ / ಕಛೇರಿ ವ್ಯಾಪ್ತಿಯಲ್ಲಿ **ದಿನಾಂಕ: 31-05-2020** ರವರೆಗೆ ವಿವಿಧ ಕಾರಣಗಳಿಂದಾಗಿ ಉದ್ಭವಿಸಿರುವ / ಖಾಲಿಯಾಗಿರುವ ಲೆಕ್ಕಾಧೀಕ್ಷಕರ ಖಾಲಿ ಹುದ್ದೆಗಳ ಮಾಹಿತಿಯನ್ನು **ನುಡಿ-1 ಎಕ್ಸೆಲ್**ನಲ್ಲಿ ಹುದ್ದೆವಾರು ಕ್ರೋಢೀಕರಿಸಿ obcpi2016@gmail.com ಈ ಇ-ಮೇಲ್ ವಿಳಾಸಕ್ಕೆ ಸಾಫ್ಟ್ ಕಾಪಿಯನ್ನು ಹಾಗೂ ಹಾರ್ಡ್ ಕಾಪಿಯನ್ನು ವಿವರವಾಗಿ ಸಲ್ಲಿಸತಕ್ಕದ್ದು.

[ಮಂಜುನಾಥ.ಸಿ]
ಅಪರ ನಿರ್ದೇಶಕರು[ಆಡಳಿತ]

ಇವರಿಗೆ :-

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು(ಆಡಳಿತ).
2. ಸಂಬಂಧಿಸಿದ ಶಾಲಾ / ಕಾಲೇಜು ಮುಖ್ಯಸ್ಥರಿಗೆ [ಉಪನಿರ್ದೇಶಕರು(ಆಡಳಿತ) ರವರ ಮೂಲಕ]
3. ಸಂಬಂಧಿಸಿದ ಸಿಬ್ಬಂದಿಗಳಿಗೆ [ಕಛೇರಿ ಮುಖ್ಯಸ್ಥರ ಮೂಲಕ].

ಪ್ರತಿಯನ್ನು:-

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ನಿರ್ದೇಶಕರಿಗೆ.
3. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ. ಮೈಸೂರು
4. ಸಂಬಂಧಿಸಿದ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
5. ಸಂಬಂಧಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರಾಂಶುಪಾಲರುಗಳಿಗೆ.
6. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
7. ಈ ಕಛೇರಿಯ ಎಲ್ಲಾ ಶಾಖೆಗಳ ಶಾಖಾಧಿಕಾರಿಗಳಿಗೆ ಕಳುಹಿಸುತ್ತಾ ಅವರ ವಿಭಾಗದ ನೌಕರರಿಗೆ ಸೂಚನೆ ನೀಡಲು ತಿಳಿಸಿದೆ.
8. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಕಳುಹಿಸುತ್ತಾ ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್ ಸೈಟ್ ವಿಳಾಸ www.schooleducation.kar.nic.in ರಲ್ಲಿ ಪ್ರಕಟಿಸಲು ಕ್ರಮವಹಿಸುವುದು.
9. ಕಛೇರಿ ಪ್ರತಿ.

# ಅನುಬಂಧ

| ಕ್ರ.ಸಂ | ನೌಕರರ ಹೆಸರು, ಪದನಾಮ ಮತ್ತು ಕಛೇರಿ ವಿಳಾಸ | ಪ್ರ.ದ.ಸ ಜ್ಯೇಷ್ಠತಾ ಸಂಖ್ಯೆ | ಪ್ರವರ್ಗ [ಪ.ಜಾತಿ / ಪ.ಪಂಗಡ /ಇತರೆ] |
|---|---|---|---|
| 1 | ಕೆ. ಹೆಚ್. ಶಶಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ನಾಗಮಂಗಲ [ತಾ], ಮಂಡ್ಯ ಜಿಲ್ಲೆ. | 4151 | ಇತರೆ |
| 2 | ಪೂವಮ್ಮ, ಪ್ರಥಮ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ [ಆಡಳಿತ], ಸಾ.ಶಿ.ಇಲಾಖೆ, ಮೈಸೂರು. | 4214 | ಇತರೆ |
| 3 | ಜೆ. ಗಿರೀಶ್, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ನಾಗಮಂಗಲ ತಾ, ಮಂಡ್ಯ ಜಿಲ್ಲೆ. | 4333 | ಇತರೆ |
| 4 | ಕಾಶೀಬಾಯಿ ಎಸ್ ಪಾಟೀಲ, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್), ಬೆಂಗಳೂರು ನಗರ. | 4387 | ಇತರೆ |
| 5 | ಎಸ್. ಶ್ರೀಕಾಂತ, ಪ್ರಥಮ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ | 4838 | ಇತರೆ |
| 6 | ಡಿ. ಬಿ. ಮಂಜುನಾಥ, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ನಾಗಮಂಗಲ, ಮಂಡ್ಯ ಜಿಲ್ಲೆ, | 4996 | ಪ.ಜಾತಿ |
| 7 | ಎನ್. ಲೋಕೇಶ್, ಪ್ರಥಮ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ, ಬೆಂಗಳೂರು ಉತ್ತರ ಜಿಲ್ಲೆ. | 5004 | ಪ.ಜಾತಿ |
| 8 | ವಿಜಯಕುಮಾರ ಇಕ್ಕೇರಿ, ಪ್ರಥಮ ದರ್ಜೆ ಸಹಾಯಕರು, ಅಕ್ಷರ ದಾಸೋಹ, ತಾಲ್ಲೂಕು ಪಂಚಾಯಿತಿ, ಹೊಸನಗರ, ಶಿವಮೊಗ್ಗ ಜಿಲ್ಲೆ | 5006 | ಇತರೆ |
| 9 | ವೀಣಾ. ಆರ್, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಉತ್ತರ ವಲಯ–01, ಬೆಂಗಳೂರು ಉತ್ತರ ಜಿಲ್ಲೆ | 5046 | ಇತರೆ |
| 10 | ಬಿ. ಆಜಂರಾಹಿ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | 5047 | ಇತರೆ |
| 11 | ಅಬ್ದುಲ್ ರೆಹಮಾನ್, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, [ಪ್ರೌಢಶಾಲಾ ವಿಭಾಗ], ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ. | 5114 | ಇತರೆ |
| 12 | ಎಂ. ಲಲಿತಾ ದೇವಿ, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ–3, ಕೆ.ಕಾಮರಾಜ ರಸ್ತೆ, ಬೆಂಗಳೂರು–42 | 5152 | ಪ.ಜಾತಿ |
| 13 | ಆರ್ ಎಂ ಮಲ್ಲಿಕಾರ್ಜುನ, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ | | ಇತರೆ |
| 14 | ಜಿ. ಶೈಲಶ್ರೀ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು. | 5307 | ಇತರೆ |

| | | | |
|---|---|---|---|
| 15 | ಎನ್. ರವೀಂದ್ರ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪ್ರೌಢಶಾಲೆ, ಅರಸಾಳು, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | 5588 | ಇತರೆ |
| 16 | ಶಶಿಧರಶರ್ಮ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪ್ರೌಢಶಾಲೆ, ಕೆ.ಬೆಳ್ತೂರು, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು. | 5734 | ಇತರೆ |
| 17 | ಎಸ್.ಅನಿತ, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ವಲಯ–01, ಬೆಂಗಳೂರು | 5774 | ಇತರೆ |
| 18 | ಗೋವಿಂದರಾಜು ಕೆ ಆರ್, ಪ್ರಥಮ ದರ್ಜೆ ಸಹಾಯಕರು, . ಡಯಟ್ ಬೆಂಗಳೂರು ಉತ್ತರ ಜಿಲ್ಲೆ | 5915 | ಪ.ಜಾತಿ |
| 19 | ಹೆಚ್ ಎಂ ಮನೋಜ್ ಕುಮಾರ್ ಪೈ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು | 6005 | ಇತರೆ |
| 20 | ಪಿ. ಶಕುಂತಲ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪ್ರೌಢಶಾಲೆ, ಕುಕ್ಕರಹಳ್ಳಿ, ಮೈಸೂರು ಜಿಲ್ಲೆ. | 6043 | ಇತರೆ |
| 21 | ಟಿ. ಆರ್. ಮಂಜುಳ, ಪ್ರಥಮ ದರ್ಜೆ ಸಹಾಯಕರು, ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು | 6056 | ಇತರೆ |
| 22 | ಸುಬ್ರಮಣ್ಯ. ಎಂ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪ್ರೌಢಶಾಲೆ, ದುರ್ಗಿಗುಡಿ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | 6106 | ಇತರೆ |
| 23 | ಜಿ ವಿ ಗೋವಿಂದೇಗೌಡ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಬಂಗಾರಪೇಟೆ ತಾಲ್ಲೂಕು ಕೋಲಾರ ಜಿಲ್ಲೆ | 6254 | ಇತರೆ |

C.M.

(ಮಂಜುನಾಥ.ಸಿ)
ಜಂಟಿ ನಿರ್ದೇಶಕರು(ಆಡಳಿತ)

E:\C5(1) new\Accounts Sup-2020\pramomemo.doc

## ನಮೂನೆ

**ಲೆಕ್ಕಾಧೀಕ್ಷಕರ ವೃಂದಕ್ಕೆ ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿಗೊಳಿಸಲು ಅಗತ್ಯವಿರುವ ಮಾಹಿತಿ**

| ಕ್ರ.ಸಂ. | ನೌಕರರ ಸೇವಾ ವಿವರ | ಮಾಹಿತಿ |
|---|---|---|
| 1 | 2018ನೇ ಸಾಲಿನಲ್ಲಿ ಪ್ರಕಟಿಸಿರುವ ಪ್ರ.ದ.ಸ ಹುದ್ದೆಯ ಜೇಷ್ಠತಾ ಕ್ರಮಾಂಕ | |
| 2 | ನೌಕರರ ಹೆಸರು | |
| 3 | ಪದನಾಮ | |
| 4 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ<br><br>ಮೊಬೈಲ್ ಸಂಖ್ಯೆ : | |
| 5 | ಜನ್ಮ ದಿನಾಂಕ | |
| 6 | ಪ್ರ.ದ.ಸ ಹುದ್ದೆಯಲ್ಲಿ ಬಡ್ತಿ ಸಕ್ರಮಗೊಂಡ ದಿನಾಂಕ | |
| 7 | ಗುಂಪು (ಪ.ಜಾತಿ, ಪ.ವರ್ಗ/ ಇತರೆ) | |
| 8 | ಇಲಾಖಾ ಪರೀಕ್ಷಗಳಲ್ಲಿ ಉತ್ತೀರ್ಣತೆ<br>1. ಅಕೌಂಟ್ಸ್ ಹೈಯರ್<br>2. ಎಸ್.ಎ.ಎಸ್ ಪರೀಕ್ಷೆ: ಭಾಗ-1<br>ಭಾಗ-2<br>ಭಾಗ-3 | **ನೋಂದಣಿ ಸಂಖ್ಯೆ ದಿನಾಂಕ** |
| 9 | ಕಾರ್ಯನಿರ್ವಹಣಾ ವರದಿಗಳು 2013-14 ರಿಂದ 2017-18 ರವರೆವಿಗೆ ವರ್ಷವಾರು ಪ್ರತ್ಯೇಕವಾಗಿ ಸಲ್ಲಿಸುವುದು | |
| 10 | ಇಲಾಖಾ ವಿಚಾರಣೆ / ದೂರು/ ನ್ಯಾಯಲಯದ ಪ್ರಕರಣಗಳು ಇದ್ದಲ್ಲಿ ವಿವರ | |
| 11 | ಷರಾ | |

ಮೇಲ್ಕಂಡ ಎಲ್ಲಾ ಅಂಶಗಳು ಸಂಬಂಧಿತ ನೌಕರರ ಸೇವಾ ವಹಿಯನ್ನು ಪರಿಶೀಲಿಸಿ, ಮಾಹಿತಿಯನ್ನು
ನೀಡಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಕಛೇರಿ ಮುಖ್ಯಸ್ಥರ ಸಹಿ
ಮೊಹರಿನೊಂದಿಗೆ

e:\c5(1) new\acnts supdt _prom 2017\acnts supdt_note.docx